ಸೀದಾ ರೂಮಿಗೆ ಬಂದು ನಮಸ್ಕಾರ ಮಾಡಿ ಕೂತ ಆಕೆ – ಹಣೆಯ ಮೇಲೆ ಅದೇ ಆಗ ಫ್ರೆಶ್ಶಾಗಿ ವಿಭೂತಿ ಧರಿಸಿದ್ದ ಆಕೆ – ತಾನೂ ಕರ್ನಾಟಕದವಳೆಂದೂ, ಒಂದು ವಾರದಿಂದ ಇದೇ ಹೋಟೆಲ್ಲಿನಲ್ಲಿ ನಡೆಯುತ್ತಿರುವ 'ಸತ್ಸಂಗ ಕಮ್ಮಟ'ದಲ್ಲಿ ಭಾಗಿಯಾಗಿದ್ದೇನೆಂದೂ, ಐದು ವರ್ಷಗಳ ಕೆಳಗೆ ಶಿವಮೊಗ್ಗದ ರೋಟರಿ ಕ್ಲಬ್ಬಿನಲ್ಲಿ 'ದೇವರು, ಅಧ್ಯಾತ್ಮ ಹಾಗೂ ಆಧುನಿಕ ಮಾನವ' ಎಂಬ ವಿಷಯ ಕುರಿತು ರುದ್ರಣ್ಣನವರು ಮಾತಾಡಿದ್ದನ್ನು ತಾನು ಕೇಳಿದ್ದೆನೆಂಬುದನ್ನೂ ಒಂದೇ ಉಸುರಿಗೆ ಒಪ್ಪಿಸಿದಳು. ಇದಲ್ಲವೇ ಜೀವ ಸಂಚಾರ! ಈಕೆಯ ಹಣೆಯ ವಿಭೂತಿ ಸಾಕ್ಷಾತ್ ಅಕ್ಕಮಹಾದೇವಿಯ ಹಣೆಯ ವಿಭೂತಿಯಂತೆ ಕಂಗೊಳಿಸುತ್ತಿದೆ ಎನ್ನಿಸಿದ ತಕ್ಷಣ... ಈಕೆ... ಈ ಮಹಾದೇವಿ ಈಗಿಂದೀಗ ಆ ಪ್ರಭುದೇವಸ್ವಾಮಿ ಝಳಪಿಸುತ್ತಿರುವ ಸಾವಿನ ತೂಗುಕತ್ತಿಯನ್ನು ಹೊಡೆದು ಕೆಡವಿ ತನ್ನನ್ನು ಈ ಕೆಟ್ಟ ಕನಸಿನಿಂದ ಪಾರುಮಾಡಿ ಜೀವ ಕೊಡಬಲ್ಲಳು ಎಂದು ರುದ್ರಣ್ಣ ಖುಷಿಯಿಂದ ಕಂಪಿಸತೊಡಗಿದರು.

ಅಂತೂ ಈ ಸಂಜೆಯ 'ಸತ್ಸಂಗ ಕಮ್ಮಟ'ದ ಸಭೆಯಲ್ಲಿ ಆವತ್ತು ಶಿವಮೊಗ್ಗದಲ್ಲಿ ಮಾತಾಡಿದ್ದ ವಿಷಯದ ಬಗ್ಗೆ ನೀವು ಮಾತಾಡಲೇಬೇಕೆಂದು ಮತ್ತೊಮ್ಮೆ ಕೇಳಿಕೊಂಡ ಆಕೆ ಯಾವ ಮಾಯದಲ್ಲಿ ಬಂದಿದ್ದಳೋ ಅದೇ ಮಾಯದಲ್ಲಿ ಕಣ್ಮರೆಯಾದಳು; ಇತ್ತ ರುದ್ರಣ್ಣ ಸಂಜೆ ದೊರೆಯಲಿರುವ ಆಕೆಯ ಮೆಚ್ಚುಗೆಯ ನೋಟಕ್ಕಾಗಿ ಹಾಗೂ ಭಾಷಣ ಕೇಳಲಿರುವ ಸಭಾಸದರ ಚಪ್ಪಾಳೆಗಳಿಗಾಗಿ ಕಾತರಿಸುತ್ತಾ ಗೆಸ್ಟ್ ಹೌಸಿನ ಟೇಬಲ್ಲಿನ ಮೇಲಿದ್ದ ಪುಟ್ಟ ನೋಟ್ ಬುಕ್ಕಿನಲ್ಲಿ ತಲೆಗೆ ತೋಚಿದ ಟಿಪ್ಪಣಿ ಗೀಚತೊಡಗಿದರೆ... ಅಕ್ಷರಗಳೇ ಮರೆತು ಹೋದಂತಿತ್ತು. ಆದರೂ ಹುರುಪಿನಿಂದ ಮೇಲೆದ್ದವರೇ ಸಂಜೆಯ ಸಭೆಗೆ ಯಾವ ಶರಟು ಹಾಕಬೇಕೆಂದು ಸೂಟ್‌ಕೇಸ್ ತಡಕಾಡಿ ಆ ದರಿದ್ರ ಸ್ವಾಮಿಯ ಭಯದಿಂದಾಗಿ, ಕೈಗೆ ಸಿಕ್ಕ ಯಾವಯಾವುದೋ ಶರಟುಗಳನ್ನು ತುರುಕಿಕೊಂಡು ಬಂದಿರುವುದನ್ನು ಕಂಡು ಪೆಚ್ಚಾದರು. ಆದರೂ ಇದ್ದದ್ದರಲ್ಲಿ ಕೊಂಚ ಠಿಕಾವಾದ ಶರಟು ಹಾಕಿಕೊಂಡು ಸಂಜೆಯ ಸಭೆಗೆ ಬಂದು ನಿಂತರು. ರುದ್ರಣ್ಣನವರ ಕಣ್ಣು ಎತ್ತ ಹರಿದರೂ ಆ ವಿಭೂತಿ ಮಹಿಳೆ ಮಾತ್ರ ಎಲ್ಲೂ ಕಾಣಲಿಲ್ಲ. ತಮ್ಮ ಭಾಷಣದ ಸರದಿ ಬಂದಾಗ, ಅವಳ ಆ ವಿಭೂತಿ ಹಣೆಗಾಗಿ ಹುಡುಕಾಡುತ್ತಾ 'ಅಧ್ಯಾತ್ಮ' ಎನ್ನಲೋ, 'ಆಧ್ಯಾತ್ಮ' ಎನ್ನಲೋ ಎಂದು ತಡವರಿಸುತ್ತಾ ನಿಂತರು. ಈ ಸಭೆ ಯಾವುದೋ... ಇದು ಯಾವ ಊರೋ... ಆ ವಿಭೂತಿ ಮಹಿಳೆಯ ಹೆಸರು ಏನೋ... ಒಂದೂ ನೆನಪಾಗದೆ... ರುದ್ರಣ್ಣನವರಿಗೆ ತಾವು ಮಾತಾಡಬೇಕಾಗಿದ್ದ ವಿಷಯವೇ ಮರೆತುಹೋಯಿತು. ಕೈಲಿದ್ದ ಟಿಪ್ಪಣಿಗಳನ್ನು ತೆಗೆದು ನೋಡಿದರೆ... ಅದು ಕನ್ನಡದ ಟಿಪ್ಪಣಿಯೋ, ಇಂಗ್ಲಿಷ್ ಟಿಪ್ಪಣಿಯೋ ಒಂದೂ ಗೊತ್ತಾಗಲಿಲ್ಲ. ಸಭೆಯಲ್ಲಿ ಕೂತಿದ್ದ ವಯಸ್ಸಾದ ಜನ ರುದ್ರಣ್ಣನವರ ಗೊಂದಲದ ನಡೆಗಳನ್ನು ಕೂಡ ಅವರ ಭಾಷಣದ ಆರಂಭದ ಒಂದು ರಿಚುವಲ್ ಎನ್ನುವಂತೆ ತಂತಮ್ಮ ಗಾಜಿನಂಥ ಕಣ್ಣುಗಳಲ್ಲಿ ನೋಡುತ್ತಲೇ ಇದ್ದರು.

ಇನ್ನು ತಡ ಮಾಡದೆ ರುದ್ರಣ್ಣನವರು ಮಾತು ಶುರು ಮಾಡಲೇಬೇಕಾಗಿತ್ತು: 'ನೋಡಿ! ಬದುಕಿದ್ದಾಗ ಮನುಷ್ಯ... ಎಷ್ಟು ಮೆರೀತಾನೆ... ಹಾಂ! ಕವಿ ಶೆರ್ಲಿ ಒಂದು ಮಾತು ಹೇಳ್ತಾನೆ... ಸಾವು... ಅದೇ ಸಾವು... (ಚಣ ಮೌನ) ಹಾಂ! ಅದೇ ಅದು ಬಂದೇ ಬರುತ್ತೆ... (ಕೊಂಚ ನಗಲೆತ್ನಿಸುವರು) ಹೌದು! ಸಾವು ಕಟ್ಟಿಟ್ಟ ಬುತ್ತಿ! ಆದರೆ... ಕವಿ ಶೆರ್ಲಿ ಏನು ಹೇಳ್ತಾನಪ್ಪಾ ಅಂದ್ರೆ... 'ಓನ್ಲಿ ದಿ ಆಕ್ಷನ್ ಆಫ್ ದಿ ಜಸ್ಟ್ ಸ್ಮೆಲ್ ಸ್ವೀಟ್ ಅಂಡ್ ಬ್ಲಾಸಮ್ ಇನ್ ದೇರ್ ಡಸ್ಟ್' ಅಂತ! ಗೋಲ್ಡನ್ ವರ್ಡ್ಸ್ ಅಲ್ವಾ! ಅಂದರೆ... ನಾವು ಬದುಕಿದ್ದಾಗ ನ್ಯಾಯವಂತರಾಗಿ ಮಾಡುವ ಕೆಲಸಗಳೇ ನಾವು ಸತ್ತು ಮಣ್ಣಾದ ಮೇಲೆ ಎಲ್ಲೆಡೆ ಸುಗಂಧದಂತೆ ಹರಡುತ್ತವೆ ಅಂತ! ಅಂದರೆ... ನಾವು ಹಾಗೆ ನಡೆದುಕೊಳ್ಳದಿದ್ದರೆ... ನಮ್ಮ ಕೆಲಸಗಳು ಕೊಳೆತು ನಾರಿ ಎಲ್ಲೆಡೆ ದುರ್ಗಂಧ ಹಬ್ಬಿಸ್ತಾವೆ ಅಂತ...'

ಇಲ್ಲಿಂದಾಚೆಗೆ ಮಾತು ಮುಂದುವರಿಸಲು ಮುಂದೆ ಯಾವ ಐಡಿಯಾ ತನ್ನ ತಲೆಗೆ